RD 40 BMM 2018

-43-

# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಬಿಡಿ\1357\2016\ಸನಿಕಾಸ-2

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಭೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 28.11.2016

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ

**ವಿಷಯ:** ದೂರುದಾರರ ಜಮೀನು ಸ. ನಂ: 265/3 ಇದನ್ನು ದಾಖಲೆಗಳ ಪ್ರಕಾರ ಮೊಜಣಿ ಮಾಡಿ, ಹದ್ದುಬಸ್ತು ಗುರುತಿಸಿ ಕಲ್ಲು ನೆಟ್ಟು ಪೂರ್ಣಗೊಳಿಸುಂತೆ ಸಕ್ಷಮ ಪ್ರಾಧಿಕಾರಕ್ಕೆ ಶಿಪಾರಸ್ಸು ಮಾಡುವ ಕುರಿತು.

*******

ಶ್ರೀ.ಮರಿಯಪ್ಪ ಹೆಚ್.ಡಿ., ಬಿನ್ ದೊಡ್ಡಮಲ್ಲೇಗೌಡ, ಹಿಂಡಿಸಿಗೆರೆ, ಸಿ.ಎಸ್.ಪುರ ಹೋಬಳಿ, ಗುಬ್ಬಿ ತಾಲ್ಲೂಕು, ತುಮಕೂರು ಜಿಲ್ಲೆ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ ಶ್ರೀ.ಎನ್.ಆರ್.ಉಮೇಶ್ ಚಂದ್ರ, ಹಿಂದಿನ ತಹಶೀಲ್ದಾರ್ ಗುಬ್ಬಿ ತಾಲ್ಲೂಕು, ತುಮಕೂರು ಜಿಲ್ಲೆ (ಇನ್ನು ಮುಂದೆ "ಎದುರುದಾರ ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ಅವ್ಯವಹಾರದ ಬಗ್ಗೆ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದ್ದಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-**

ದೂರುದಾರರು ತಮ್ಮ ದೂರಿನಲ್ಲಿ ಗುಬ್ಬಿ ತಾಲ್ಲೂಕು ಹಿಂಡಸ್ಕೆರೆ ಗ್ರಾಮದ ಸ. ನಂ: 265/3 ಕ್ಷೇತ್ರ 21ಗು., ಜಮೀನಿಗೆ ದೂರುದಾರರು ಮಾಲೀಕರಾಗಿರುತ್ತಾರೆ. ಈ ಜಮೀನಿಗೆ ಮೋಜಣಿ ಇಲಾಖೆಯವರು ಹದ್ದುಬಸ್ತು ಮಾಡಿದ್ದು ಆದರೆ ಪಕ್ಕದ ಜಮೀನು ಸ. ನಂ: 259ರ ಮಾಲೀಕರಾದ ಮರಿಯಣ್ಣ ರವರು ಇದನ್ನು ಪ್ರಶ್ನಿಸಿ ಡಿ.ಡಿ.ಎಲ್.ಆರ್. ತುಮಕೂರು ರವರ ಮುಂದೆ ಮೇಲ್ಮನವಿ ಸಲ್ಲಿಸಿದ್ದು ಅದು ವಜಾಗೊಂಡಿರುತ್ತದೆ. ಮೋಜಣಿ ಇಲಾಖೆಯವರು

Sd/-

ಹದ್ದುಬಸ್ತು ಗುರುತಿಸಿ ಕಲ್ಲು ನೆಟಿರುತ್ತಾರೆ. ಆದರೆ ಮರಿಯಣ್ಣನ ಕುಟುಂಬದವರು ಗಲಾಟೆ ಮಾಡಿ ಈ ಮೇರೆ ಕಲ್ಲುಗಳನ್ನು ಕಿತ್ತುಹಾಕಿದ್ದಾರೆ. ದಿ: 17.7.2015ರಂದು ಎದುರುದಾರರ ಸಮಕ್ಷಮ ಎರಡೂ ಜಮೀನುಗಳ ಮೇರೆ ಗುರುತಿಸಲು ಸಹಕರಿಸುವುದಾಗಿ ಬರೆದುಕೊಡಲಾಗಿದೆ. ಈ ಒಪ್ಪಿಗೆ ಪತ್ರದ ಆಧಾರದ ಮೇಲೆ ಎದುರುದಾರರು ದಿ: 15.3.2016ರಂದು ಸ್ಥಳಕ್ಕೆ ಆಗಮಿಸಿ ದೂರುದಾರರ ಜಮೀನಿನಲ್ಲಿರುವ 7 ತೆಂಗಿನ ಮರಗಳು, 14 ಅಡಿಕೆ ಮರಗಳನ್ನು ಹಾಗೂ ಪೈಪ್ ಲೈನ್ ಅನ್ನು ಜೆ.ಸಿ.ಬಿ ಯಂತ್ರದಿಂದ ಕಿತ್ತು ಹಾಕಿರುತ್ತಾರೆ. ಆದರೆ ಎದುರುದಾರರು ಮರಿಯಣ್ಣನು ಒತ್ತುವರಿ ಮಾಡಿದ ಜಮೀನನ್ನು ತೆರವುಗೊಳಿಸದೆ ಹೋಗಿರುತ್ತಾರೆ. ಆದ್ದರಿಂದ ಎದುರುದಾರರ ವಿರುದ್ಧ ಸೂಕ್ತ ಕ್ರಮ ಕೈಗೊಂಡು ತಮ್ಮ ಜಮೀನಿನ ಮೇರೆಯನ್ನು ಸರಿಯಾಗಿ ಗುರುತಿಸಲು ಆದೇಶ ನೀಡಬೇಕೆಂದು ದೂರು ಸಲ್ಲಿಸಿದ್ದಾರೆ.

3) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ 2010ರಲ್ಲಿ ಭೂ ಮಾಪಕರ ಅಳತೆಗೆ ಮರಿಯಣ್ಣನವರು ಆಕ್ಷೇಪ ವ್ಯಕ್ತಪಡಿಸಿ ತಹಶೀಲ್ದಾರ್ ಗುಬ್ಬಿ ರವರಿಗೆ ಅರ್ಜಿ ಸಲ್ಲಿಸಿರುತ್ತಾರೆ. ಇದರ ಆದೇಶದ ಮೇರೆಗೆ ಸ. ನಂ: 265/3ರ ಜಮೀನಿಗೆ ಹದ್ದುಬಸ್ತು ಗುರುತಿಸಿದ ನಂತರವೂ ಮರಿಯಣ್ಣ ಡಿ.ಡಿ.ಎಲ್ ಆರ್. ರವರಲ್ಲಿ ಮೇಲ್ಮನವಿ ಸಲ್ಲಿಸಿದ್ದು ಅದು ವಜಾಗೊಂಡಿರುತ್ತದೆ. ದಿ: 28.5.2016ರಂದು ಸ. ನಂ: 265ರ ಹದ್ದುಬಸ್ತು ಅಳತೆಗಾಗಿ ಮೋಜಣಿ ತಂತ್ರಾಂಶದಲ್ಲಿ ಹಂಚಿಕೆಯಾಗಿದ್ದು ದಿ: 29.7.2016ರಂದು ದಿನಾಂಕ ನಿಗಧಿ ಪಡಿಸಿರುತ್ತಾರೆ. ದಿ: 29.7.2016ರಂದು ಮೋಜಣಿ ಕೆಲಸ ಪೂರೈಸಿದ್ದು ಭೂ ಮಾಪನ ಶಾಖೆಯಿಂದ ವರದಿ ಬರಬೇಕಾಗಿರುತ್ತದೆ. ಆದ್ದರಿಂದ ತಮ್ಮಿಂದ ಯಾವುದೇ ಕಾನೂರು ಬಾಹೀರವಾಗಿ ದೂರುದಾರರಿಗೆ ತೊಂದರೆ ನೀಡಿರುವುದಿಲ್ಲ ಆದ್ದರಿಂದ ಸದರಿ ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಕೇಳಿಕೊಂಡಿದ್ದಾರೆ.

-41-

4) ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ಎದುರುದಾರರು ಮರಿಯಣ್ಣನಿಗೆ ಇರುವ ರಾಜಕೀಯ ಬೆಂಬಲದಿಂದ ಯಾವುದೇ ಹದ್ದುಬಸ್ತು ಕೆಲಸ ಪೂರೈಸದೆ ಸುಳ್ಳು ಆಕ್ಷೇಪಣೆ ಸಲ್ಲಿಸಿರುತ್ತಾರೆ. ದಿ: 29.7.2016ರಂದು ಸ. ನಂ: 265/3ರ ಅಳತೆ ಕೆಲಸ ಪೂರೈಸಲಾಗಿದೆ ಅಂತ ತಪ್ಪು ಹೇಳಿಕೆ ನೀಡಿರುತ್ತಾರೆ. ಸ. ನಂ: 265/3ರ ಜಮೀನಿಗೆ ಪಕ್ಕದ ಜಮೀನಿನವರು ಕಿತ್ತುಹಾಕಿದ ಹದ್ದುಬಸ್ತು ಕಲ್ಲು ಮತ್ತು ತಂತಿ ಬೇಲಿ ಕಂಬಗಳನ್ನು ಹಾಕಿಕೊಳ್ಳಲು ದೂರುದಾರರಿಂದ ಎದುರುದಾರರು ಹಣ ಕಟ್ಟಿಸಿಕೊಂಡು ಇದುವರೆಗೆ ಕೆಲಸ ಪೂರೈಸಿರುವುದಿಲ್ಲ. ಆದ್ದರಿಂದ ಎದುರುದಾರರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಕೇಳಿಕೊಂಡಿದ್ದಾರೆ.

5. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

ಅ) "ಸ. ನಂ: 265/3 ಮತ್ತು ಸ. ನಂ: 259 ಪಕ್ಕಪಕ್ಕದ ಜಮೀನುಗಳಾಗಿದ್ದು ದೂರುದಾರರ ಜಮೀನಿಗೆ ಹದ್ದುಬಸ್ತು ಮಾಡಿ ಕಲ್ಲು ನೆಡುವಂತೆ ಅರ್ಜಿ ಸಲ್ಲಿಸಿದಾಗ ತಹಶೀಲ್ದಾರ್ ರವರು 2010ರಲ್ಲಿ ಮೋಜಣಿ ಮಾಡಿ ಕಲ್ಲು ನೆಟ್ಟಿರುತ್ತಾರೆ. ಆದರೆ ಈ ಮೊಜಣಿ ಕಾರ್ಯವನ್ನು ಸ. ನಂ: 259ರ ಮಾಲೀಕರಾದ ಮರಿಯಣ್ಣ ಡಿ.ಡಿ.ಎಲ್.ಆರ್. ರವರ ಮುಂದೆ ಮೇಲ್ಮನವಿ ಸಲ್ಲಿಸಿರುತ್ತಾರೆ. ಆ ಮೇಲ್ಮನವಿ ವಿಚಾರಣೆಗೊಂಡು ವಜಾ ಆಗಿರುತ್ತದೆ.

ಆ) ಆದರೆ ಮರಿಯಣ್ಣನು ವಿನಾಕಾರಣ ದೂರುದಾರರ ಜಮೀನಿನ ಹದ್ದುಬಸ್ತು ಗುರುತಿಸಿ ಕಲ್ಲು ನಡೆಸಲು ತಕರಾರು ಮಾಡುತ್ತಿದ್ದಾನೆಂದು ಕಂಡುಬರುತ್ತದೆ. ದೂರುದಾರರ ಪರವಾಗಿ ಆದೇಶವಾದ ನಂತರ ಎದುರುದಾರರು ಯಾವುದೇ ಮುಲಾಜಿಗೆ ಒಳಗಾಗದೆ ಜಮೀನಿನ ಹದ್ದುಬಸ್ತು ಗುರುತಿಸಿ ಕಲ್ಲುನೆಟ್ಟು ಕೆಲಸವನ್ನು ಪೂರೈಸಬೇಕಾಗುತ್ತದೆ. ಈ ಕೆಲಸಕ್ಕೆ ತಕರಾರು ಮಾಡಿದ ವ್ಯಕ್ತಿಯ ವಿರುದ್ಧ ಕಾನೂನು ಕ್ರಮ ಜರುಗಿಸುವ ಅಧಿಕಾರ ಎದುರುದಾರರಿಗೆ ಇದೆ. ಒಂದು ವೇಳೆ ಕಲ್ಲು ನೆಟ್ಟ ನಂತರ ಮರಿಯಣ್ಣ ಅವುಗಳನ್ನು

ಕಿತ್ತುಹಾಕಿ ದೂರುದಾರರಿಗೆ ತೊಂದರೆ ನೀಡಿದರೆ ಆತನ ವಿರುದ್ಧ ಕಾನೂನು ಕ್ರಮ ಜರುಗಿಸಬೇಕಾಗುತ್ತದೆ.

ಇ) ದೂರುದಾರರು ತಮ್ಮ ಪ್ರಕರಣದ ಬಗ್ಗೆ ಈ ಕಛೇರಿಗೆ ಖುದ್ದಾಗಿ ಭೇಟಿ ನೀಡಿ ದಾಖಲೆಗಳನ್ನು ಸಲ್ಲಿಸಿ ತಿಳಿಸಿದ್ದೇನೆಂದರೆ ಸ. ನಂ: 259ರ ಮಾಲೀಕ ರಾಜಕೀಯ ಹಿನ್ನೆಲೆ ವ್ಯಕ್ತಿಯಾಗಿದ್ದು ಆ ರಾಜಕೀಯ ಪ್ರಭಾವದಿಂದ ಯಾವುದೇ ಅಧಿಕಾರಿಯೂ ಕಾನೂನು ಕ್ರಮ ಕೈಗೊಳ್ಳದಂತೆ ತಡೆಯುತ್ತಿದ್ದಾನೆ. ಆದರೆ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ದಿ: 29.7.2016ರಂದು ಮೋಜಣಿ ಕೆಲಸ ಪೂರೈಸಲಾಗಿದೆ ಅಂತ ಆಕ್ಷೇಪಣೆ ಸಲ್ಲಿಸಿದ್ದು, ದೂರುದಾರರ ಪ್ರತ್ಯುತ್ತರದಲ್ಲಿ ಈ ರೀತಿ ಯಾವುದೇ ಮೋಜಣಿ ಕೆಲಸ ಮಾಡಿರುವುದಿಲ್ಲವೆಂದು ತಿಳಿಸಿದ್ದಾರೆ. ಅಲ್ಲದೆ ದೂರುದಾರರ ಜಮೀನಿನಲ್ಲಿರುವ ಗಿಡಗಳು, ತಂತಿಬೇಲಿಯನ್ನು ಮರಿಯಣ್ಣನು ಕಿತ್ತು ಹಾಕಿದ ಬಗ್ಗೆ ಫೋಟೋಗಳನ್ನು ಹಾಜರುಪಡಿಸಿದ್ದಾರೆ. ಆದ್ದರಿಂದ ದೂರುದಾರರ ಸಮಸ್ಯೆಗೆ ಸ್ಪಂದಿಸಿ ಕಾನೂನು ಪ್ರಕಾರ ಜಮೀನಿನ ಹದ್ದುಬಸ್ತು ಗುರುತಿಸಿ ಕಲ್ಲು ನಡೆಲು ಎದುರುದಾರರು ವಿಫಲರಾಗಿದ್ದಾರೆಂದು ಮೇಲ್ನೋಟಕ್ಕೆ ಕಂಡುಬರುತ್ತದೆ.

6) ಈ ಪ್ರಕರಣದಲ್ಲಿ ದೂರುದಾರರ ಜಮೀನು ಸ. ನಂ: 265/3 ಇದನ್ನು ದಾಖಲೆಗಳ ಪ್ರಕಾರ ಮೋಜಣಿ ಮಾಡಿ, ಹದ್ದುಬಸ್ತು ಗುರುತಿಸಿ ಕಲ್ಲು ನೆಟ್ಟು ಪೂರ್ಣಗೊಳಿಸಿದಾಗ ಮಾತ್ರ ಆತನ ಸಮಸ್ಯೆಗೆ ಸ್ಪಂದಿಸಿದಂತಾಗುತ್ತದೆ. ಆದ್ದರಿಂದ ಸಕ್ಷಮ ಪ್ರಾಧಿಕಾರಕ್ಕೆ ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(1) ರಡಿಯಲ್ಲಿ ನಿರ್ದೇಶಿಸುವುದು ಅಗತ್ಯವಾಗಿರುತ್ತದೆ. ಹಿಗಾಗಿ ಮಾನ್ಯ ಜಿಲ್ಲಾಧಿಕಾರಿಗಳು ತುಮಕೂರು ಇವರಿಗೆ ಈ ಬಗ್ಗೆ ಕ್ರಮ ಕೈಗೊಳ್ಳುವಂತೆ ಆದೇಶಿಸುವ ಅಧಿಕಾರವನ್ನು ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12 (1)ರಲ್ಲಿ ಗೌರವಾನ್ವಿತ ಉಪಲೋಕಾಯುಕ್ತರು ಹೊಂದಿದ್ದಾರೆ.

7) ಆದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ

-39-

ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಒಂದು ತಿಂಗಳೊಳಗೆ ಮಾನ್ಯ ಉಪಲೋಕಾಯುಕ್ತ-2 ರವರಿಗೆ ತಿಳಿಸಲು ಹೇಳಿದೆ.

28/11/16.
(ನ್ಯಾಯಮೂರ್ತಿ ಸುಬಾಷ್ ಬಿ ಆಡಿ)
ಉಪಲೋಕಾಯುಕ್ತರು,
28/11 ಕರ್ನಾಟಕ ರಾಜ್ಯ.